ಉಪಾಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ

ಶ್ರೀ ವೈ.ಕೆ. ರಾಮಯ್ಯ ಮಾಜಿ ಶಾಸಕರು, ಇವರನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಚರ್ಚೆಗೆ ಬರುವುದಕ್ಕಿಂತ ಮುಂಚೆ ತಮ್ಮಲ್ಲಿ ಒಂದು ಮನವಿ. ಶ್ರೀಮಾನ್ ವೈ.ಕೆ. ರಾಮಯ್ಯ ನವರನ್ನು ಜೈಲಿನಿಂದ ಬಿಡುಗಡೆ ಮಾಡಿದ್ದೀರೋ ಅಥವಾ ಇಲ್ಲವೋ ಎನ್ನುವುದು ನಮಗೆ ಇನ್ನೂ ಖಾತರಿಯಾಗಿಲ್ಲ. ಮತ್ತು ಅವರು ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಏನು ಬರೆದಿದ್ದಾರೆ ಎಂದರೆ "ನನ್ನ ಮೇಲೆ ಸತ್ಯಕ್ಕೆ ದೂರವಾದ ಅಪರಾಧಗಳನ್ನು ಹೊರಿಸಿ ಮೊಕದ್ದಮೆಗಳನ್ನು ಹಾಕಿದ್ದಾರೆ. ಅಕ್ರಮ ಪ್ರವೇಶ, ಅಸಭ್ಯ ವರ್ತನೆ, ಪ್ರಾಣ ಬೆದರಿಕೆ ಇನ್ನೂ ಅನೇಕ ಅಪರಾಧಗಳನ್ನು ನನ್ನ ಮೇಲೆ ಹೊರಿಸಿ ಮೊಕದ್ದಮೆಗಳನ್ನು ಹಾಕಿದ್ದಾರೆ." ಆ ಮೊಕದ್ದಮೆಗಳನ್ನು ಹಾಕತಕ್ಕದ್ದು ಸರಿಯಲ್ಲ ಎಂದು ನಾನೇ ಹೇಳುತ್ತೇನೆ.

ಉಪಾಧ್ಯಕ್ಷರು : ನೀವು ಯಾವ ನಿಯಮದ ಕೆಳಗೆ ಇದನ್ನು ಪ್ರಸ್ತಾಪ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಇದು ಜೀರೋ ಅವರ್ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನ ಒಪ್ಪುತ್ತೇನೆ ಆದರೆ ಇದು ಒಂದು ಅತ್ಯಂತ ವಿಚಾರ ಇದನ್ನು ತಾವು ಪರಿಗಣನೆ ಮಾಡಬೇಕು. ಏಕೆಂದರೆ ಒಬ್ಬರು ಮಾಜಿ ಸದಸ್ಯರಾದವರು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿ...

ಉಪಾಧ್ಯಕ್ಷರು : ನಿಮಗೆ ಅವಕಾಶ ಮಾಡಿಕೊಡುತ್ತೇನೆ, ಇದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಮಂತ್ರಿಗಳು ಹೇಳಬೇಕಲ್ಲ.ಅವರು ಇಲ್ಲಿ ಇರಬೇಕು. ಒಂದು ಪಕ್ಷದ ಮುಖಂಡರು....

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಗೃಹಸಚಿವರು ಇಲ್ಲೇ ಇದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ದಯಮಾಡಿ ಇದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದು. ಪದೇ ಪದೇ ಇದನ್ನು ಮಾತನಾಡತಕ್ಕಂಥಾದ್ದು ಅಲ್ಲ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಜೈಲಿಗೆ ಯಾವುದೇ ಸಂತೋಷಕ್ಕೋಸ್ಕರ ಹೋಗಿಲ್ಲ. ಮಾನ್ಯ ಗೃಹಮಂತ್ರಿಗಳು ಹೇಳಲಿ. ಅವರ ಕೇಸ್‌ನ್ನು ವಿತ್‌ಡ್ರಾ ಮಾಡಿ ಅವರನ್ನು ಮನೆಗೆ ಕಳುಹಿಸಿಕೊಡಿ. ಪಾಪ ಹೋಗಲಿ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ವೈ.ಕೆ. ರಾಮಯ್ಯನವರು ಒಂದು ರಾಜಕೀಯ ಪಕ್ಷದ ನಾಯಕರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಮಗೆ ಅವಕಾಶ ಮಾಡಿ ಕೊಡತಕ್ಕಂಥ ಸಂಪೂರ್ಣ ಅಧಿಕಾರ ಇದೆ. ನಾನು ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆ ಎಂದರೆ ಈಗ ಜಾಮೀನು ಕೊಟ್ಟು ನೀವು ಹೋಗಿ, ನಾವು ಬಿಡುವುದಿಲ್ಲ, ಎನ್ನುತ್ತಿದ್ದಾರೆ. ನಾನು ತಮಗೆ ಬರೆದಿರತಕ್ಕಂಥ ಪತ್ರದ ಬಗ್ಗೆ ಹೇಳಿಬಿಡುತ್ತೇನೆ.

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ : ಇದು ಒಂದು ಪಕ್ಷದ ಜವಾಬ್ದಾರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಿಮ್ಮ ಸಹಕಾರಕ್ಕೆ ನಾನು ಬರುತ್ತೇನೆ. ಮಾನ್ಯ ವೈ.ಕೆ. ರಾಮಯ್ಯನವರನ್ನು ನಾವು ಜೈಲಿಗೆ ಕಳುಹಿಸಿಲ್ಲ ಅವರೇ ಹಠಮಾಡಿ ಜೈಲಿಗೆ ಹೋಗಿದ್ದಾರೆ. ನಾನು ಏನು ಮಾಡಲಿ ಎಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಆದರೆ, ಆ ಮಾತು ಸತ್ಯಕ್ಕೆ ದೂರವಾದುದು ಎಂದು ರಾಮಯ್ಯನವರು ಹೇಳಿದ್ದಾರೆ. ಅವರ ಮೇಲೆ 4-5 ಮೊಕದ್ದಮೆಗಳನ್ನು ಹಾಕಿದ್ದಾರೆ. ಅಕ್ರಮ ಕೂಟ, ಅಕ್ರಮ ಪ್ರವೇಶ, ಅಸಭ್ಯ ವರ್ತನೆ, ಪ್ರಾಣ ಬೆದರಿಕೆ, ಇದು ಇಷ್ಟೂ ಸತ್ಯಕ್ಕೆ ದೂರವಾದುದು ಎಂದು ನಾನು ಹೇಳುತ್ತೇನೆ, ರಾಮಯ್ಯನವರು ಹೇಳುತ್ತಾರೆ. ಇದರಲ್ಲಿ ಏನೂ ಅನುಮಾನ ಇಲ್ಲ. ಮಾನ್ಯ ಗೃಹಮಂತ್ರಿಗಳ ಆತ್ಮದಲ್ಲೂ ಇದು ಇಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಆದರೆ ಬಹಿರಂಗವಾಗಿ ವಿಧಿ ಇಲ್ಲ ಅವರು ಏನು ಹೇಳುತ್ತಾರೋ ಅದು ಅವರಿಗೆ ಸೇರಿದ್ದು. ಆದರೆ ಒಂದು ಮಾತ್ರ ತಮಗೆ ಹೇಳುತ್ತೇನೆ, ಈ ರೀತಿ ಒಬ್ಬ ಜವಾಬ್ದಾರಿಯುತವಾದರತರ ಈ ರಾಜ್ಯದ ಮತ್ತು ಈ ಸದನದ ಮಾಜಿ ಶಾಸಕರು ಹಾಗೂ ಮಂತ್ರಿಗಳಾಗಿದ್ದವರ ಬಗ್ಗೆ ರಾಜಕೀಯಕ್ಕಿಂತ ಹೆಚ್ಚಾಗಿ ಪೂರ್ವಗ್ರಹ ಪೀಡಿತವಾಗದೆ ಸರ್ಕಾರ ಪ್ರಾಮಾಣಿಕವಾದಂತಹ ಒಂದು ಚಿಂತನೆ ಮಾಡಬೇಕು. ಆದುದರಿಂದ ಮಾನ್ಯ ಅಧ್ಯಕ್ಷರೆ, ಗೃಹಸಚಿವರು ಹಾಕಿರತಕ್ಕಂಥ ಮೊಕದ್ದಮೆಗಳು ಇವರ ಮೇಲೆ ಅಲ್ಲ. ಈ ಮೊಕದ್ದಮೆಗಳನ್ನು ಹಾಕಬೇಕಾದರೆ....

ಉಪಾಧ್ಯಕ್ಷರು : ನಾನು ಏನು ಮಾಡಬೇಕು ಎಂದು ಸಲಹೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ತಾವು ಏನು ಮಾಡಬೇಕು ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಏನು ಮಾಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಇದ್ದಾರೆ. ಮಾನ್ಯ ಗೃಹ ಸಚಿವರು ಇಲ್ಲೇ ಇದ್ದಾರೆ. ಪ್ರಾಣ ಭಯ, ?ಯಾರಿಗೆ? ಯಾರ ಮೇಲೆ? ಪ್ರಾಣ ಬೆದರಿಕೆ.?

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರೇ ನನಗೆ ಸ್ವಲ್ಪ ಅವಕಾಶ ಕೊಡುತ್ತೀರಾ? ಮಾನ್ಯ ನಂಜೇಗೌಡರನ್ನು ಕೇಳುತ್ತೇನೆ, ಇಲ್ಲಿ ನಾನು ಹೇಗೆ ಕೆಲಸ ಮಾಡಬೇಕು ಎಂದು ತಾವು ಸಲಹೆ ಮಾಡಬೇಕು. ಇಲ್ಲವೇ ಇದನ್ನು ಕಾನೂನಿನ ಚೌಕಟ್ಟಿನೊಳಗೆ ತೆಗೆದುಕೊಂಡು ಬನ್ನಿ. ಹೀಗೆ ಪ್ರಸ್ತಾಪ ಮಾಡಿದರೆ ಸಭೆ ನಡೆಸುವುದು ಹೇಗೆ?

ಶ್ರೀ ಹೆಚ್.ಎನ್. ನಂಜೇಗೌಡ : ನಿನ್ನೆ ಇದರ ಬಗ್ಗೆ ಜೌಪಚಾರಿಕವಾದ ಚರ್ಚೆಯಾಯಿತು. ಈಗ ಮಾನ್ಯ ಗೃಹ ಸಚಿವರು ಏನಾದರೂ ಹೇಳುವುದಿದ್ದರೆ ಹೇಳಲಿ, ಇಲ್ಲದಿದ್ದರೆ, ಮುಂದಿನ ಬಿಸಿನೆಸ್ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು : ತಾವು ಹಿರಿಯರಿದ್ದೀರಿ, ತಾವೇ ಸಲಹೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಏನು ಎರಡು ಅಭಿಪ್ರಾಯವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವೈ.ಕೆ. ರಾಮಯ್ಯ ನವರ ಬಂಧನದ ವಿಚಾರದಲ್ಲಿ ಈ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವ ಒಂದು ಮಾತನ್ನು ನಾನು ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಂಜೇಗೌಡರು ಪ್ರಸ್ತಾಪ ಮಾಡಾದಾಗ ಹೇಳಿದ್ದೆ. ಇದನ್ನು ಹೇಳಿದ ಮೇಲೆ ಪುನಃ ಅವರು ಪ್ರಸ್ತಾಪ ಮಾಡಿದ್ದಾರೆ. ಕಾರಾಗೃಹದಿಂದ ವೈ.ಕೆ. ರಾಮಯ್ಯನವರು ಪತ್ರ ಬರೆದಿದ್ದಾರೆಂದು ನಾಗರಾಜ್‌ರವರು ಪತ್ರವನ್ನು ತಮ್ಮ ಮೂಲಕ ನನಗೆ ಕಳುಹಿಸುಕೊಟ್ಟಿದ್ದಾರೆ. ಇದಾದ ನಂತರ ನಾನು ಪೋಲೀಸ್ ಅಧಿಕಾರಿಗಳನ್ನು ಕರೆಸಿದೆ. ಏಕೆಂದರೆ ಈ ಸದನದಲ್ಲಿ ಯಾವುದೇ ವಿಚಾರ ಪ್ರಸ್ತಾಪ ಮಾಡಿದಮೇಲೆ ಬಹಳ ಜನ ಶಾಸಕರುಗಳು ಇದನ್ನು ಎತ್ತಿದ ಮೇಲೆ, ಅವರನ್ನು ಬಂಧಿಸಿದಂತರ ಅಧಿಕಾರಿಗಳನ್ನು ಪೋಲೀಸ್ ಕಮಿಷನರ್‌ರನ್ನು ಕರೆದು ಸಭಾಧ್ಯಕ್ಷರ ಒಪ್ಪಿಗೆ ಪಡೆದು, ಅವರ ಕೊಠಡಿಯಲ್ಲಿ ಇವತ್ತು ಸಭೆಯನ್ನು ಮಾಡಿದ್ದೇವೆ. ವಾಸ್ತವಾಂಶವೆಂದರೆ ಅವತ್ತು ಮಾನ್ಯ ವೈ.ಕೆ. ರಾಮಯ್ಯನವರು ಪೊಲೀಸ್ಸವರಿಗೆ ಯಾವುದೇ ರೀತಿಯ ವಿಚಾರವನ್ನು ತಿಳಿಸದೆ ಮುಷ್ಕರವನ್ನು ಮಾಡಿದರು. ಅವರಿಗೆ ಮಾಡತಕ್ಕಂಥ ಹಕ್ಕಿದೆ. ಮುಷ್ಕರವನ್ನು ಮಾಡಿದರು. ಹೇಮಾವತಿ ನೀರನ್ನು ತುಮಕೂರಿಗೆ ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರ ಅದಕ್ಕೆ ಬೇಕಾಗಿರತಕ್ಕಂಥ ಹಣ ಮತ್ತು ಆಗುತ್ತಿರತಕ್ಕಂಥ ಕಾಮಗಾರಿಯಲ್ಲಿ ತ್ವರಿತವಾಗಿ ಕೆಲಸವಾಗುವ ವಿಚಾರದಲ್ಲಿ ಯಾವುದೇ ರೀತಿಯಾದ ಅಡೆತಡೆಗಳನ್ನು ಮಾಡುವುದಿಲ್ಲ. ಈ ಸರ್ಕಾರಕ್ಕೆ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು, ತುಮಕೂರಿಗೆ ನೀರು ಕೊಡಬೇಕು ಎನ್ನುವುದು ನಮಗೆಲ್ಲರಿಗೆ....

ಶ್ರೀ ಜಿ.ಎಸ್. ಶಿವನಂಜಪ್ಪ : ಎಂದು ಪ್ರಾರಂಭ ಮಾಡುತ್ತೀರಿ ಎಂದು ಹೇಳಿಬಿಡಿ ಸಾಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಶಿವನಂಜಪ್ಪನವರು ಬಹಳ ಹಿರಿಯ ಸದಸ್ಯರು. ತಾವು ದಯವಿಟ್ಟು ನಾನು ಹೇಳುವುದನ್ನು ಕೇಳಿದರೆ ಆದಾದನಂತರ ಅವರು ಹೇಳುವುದನ್ನು ನಾನು ಕೇಳುವುದಕ್ಕೆ ತಯಾರಿದ್ದೇನೆ. ಹೇಮಾವತಿ ಕೆಲಸಗಳು ತುಮಕೂರಿನ ಜಿಲ್ಲೆಯಲ್ಲಿ ನಿಂತುಹೋಗಿವೆ. ಬೇಗ ಮಾಡಬೇಕು ಪ್ರಾರಂಭ ಮಾಡಿಸಬೇಕು ಎಂದು ಕೇಳುತ್ತಿದ್ದಾರೆ. ಇದರಲ್ಲಿ ರಾಜಕೀಯದ ಪ್ರಶ್ನೆ ಇಲ್ಲ. ಇಲ್ಲಿ ಯಾವ ರಾಜಕೀಯ ಮಾಡತಕ್ಕಂಥ ಅಗತ್ಯ ಇಲ್ಲ. ನಮ್ಮ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಒಂದಲ್ಲ ಹಲವಾರು ಬಾರಿ ಹೇಳಿದ್ದಾರೆ. ನಾವು ಈ ಕೆಲಸವನ್ನು ನಿಲ್ಲಿಸುವುದಿಲ್ಲ. ಬೇಗ ಇದನ್ನು ಪ್ರಾರಂಭ ಮಾಡಿ ಮುಗಿಸುತ್ತಿದ್ದೇವೆ. ನೀರನ್ನು ಕೊಡುತ್ತಿದ್ದೇವೆ. ವೈ.ಕೆ. ರಾಮಯ್ಯನವರಿಗೆ ಹಕ್ಕಿದೆ. ಅವರು ಹೋಗಿ ಗಾಂಧಿ ಪ್ರತಿಮೆ ಹತ್ತಿರ ಉಪವಾಸ ಕುಳಿತುಕೊಂಡರು. ಪೊಲೀಸರು ಅಲ್ಲಿಗೆ ಹೋದಮೇಲೆ ಇಲ್ಲಾ ನಾವು ಶಾಂತ ರೀತಿಯಿಂದ ಹೊರಟು ಹೋಗುತ್ತೇವೆ ಎಂದು ಡಿಸ್ಪರ್ಸ್ ಆದರು. ಆದಾದನಂತರ ಕುಮಾರ ಕೃಪ ಗೆಸ್ಟ್ ಹೌಸ್‌ಗೆ ಹೋದರು. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಇರಬಹುದು ಎಂದು. ಅಲ್ಲಿಗೆ ಹೋಗಿ ಅಲ್ಲೂ ಧರಣಿ ಕುಳಿತುಕೊಂಡರು. ಧರಣಿ ಕುಳಿತುಕೊಂಡ ಮೇಲೆ ಅಲ್ಲಿಗೆ ಪೊಲೀಸರು ಹೋಗಿ ಸ್ವಾಮಿ, ಇದು ಧರಣಿ

ಕುಳಿತುಕೊಳ್ಳತಕ್ಕಂಥ ಜಾಗ ಅಲ್ಲ, ಯಾರೂ ಸಹ ಕುಳಿತುಕೊಂಡರೆ ಹೇಗೆ? ಇಲ್ಲಿಗೆ ಬೇಕಾದಷ್ಟು ಜನಪರ ರಾಷ್ಟ್ರಗಳಿಂದ ಗೆಸ್ಟ್ ಎಲ್ಲಾ ಬಂದಿರುತ್ತಾರೆ. ಅಪ್ಸೆಟ್ ಮಾಡಬೇಡಿ. ದಯವಿಟ್ಟು ನೀವು ಹೋಗಿ ಎಂದು ಹೇಳಿದರು. ಅದಕ್ಕೆ ಅವರು ಇಲ್ಲಾ ನಾನು ಹೋಗುವುದಿಲ್ಲ ನನಗೆ ಅರೆಸ್ಟ್ ಮಾಡಬೇಕು ಎಂದು ಹೇಳಿದರು. ನಾವು ಅರೆಸ್ಟ್ ಮಾಡಲ್ಲ ಎಂದು ಬರೆದುಕೊಡಿ ಎಂದರೆ ಅದಕ್ಕೆ ಪೊಲೀಸರು ಬರೆದುಕೊಟ್ಟಿದ್ದಾರೆ. ನಾವು ಅರೆಸ್ಟ್ ಮಾಡಿಲ್ಲ ನೀವು ಈಗ ಹೋಗಬಹುದು ಎಂದು. ಇಲ್ಲಾ ನೀವು ಪೊಲೀಸ್ ಸ್ಟೇಷನ್ಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿದ್ದಾರೆ.

ಅಲ್ಲಿಗೆ ಇವರನ್ನು ಮಧ್ಯಾಹ್ನ 2 ಗಂಟೆಗೆ ಸದಾಶಿವನಗರದ ಪೊಲೀಸ್ ಸ್ಟೇಷನ್ಗೆ ಕರೆದುಕೊಂಡು ಹೋಗಿದ್ದಾರೆ. ಇವರ ಜೊತೆಯಲ್ಲಿ ಬಂದಂತಹ 25 ಜನರನ್ನು ಕರೆದುಕೊಂಡು ಹೋಗಿದ್ದಾರೆಂದು ಹೇಳಿದ್ದಾರೆ. ಅವರೆಲ್ಲಾ ಊಟ ಮಾಡಿದ್ದಾರೆ. ಇವರು ನಾನು ಊಟ ಮಾಡಲ್ಲ ಎಂದು ಹೇಳಿದ್ದಾರೆ. ಇವರು ಶುಗರ್ ಫೇಷಂಟ್, ಹೆಚ್ಚು ಕಡಿಮೆ ಆದರೆ ತೊಂದರೆ ಆಗಬಹುದು ಎಂದು ಹೇಳಿ ನಾವು ಒತ್ತಾಯವಾಗಿ ಫೀಡ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆಗ ಇಲ್ಲಾ ನನಗೆ ನೀರು ಕೊಡಿ, ಬೇರೆ ಏನೂ ಬೇಡ ಎಂದು ಹೇಳಿದ್ದಾರೆ. ಆಮೇಲೆ ಮಧ್ಯಾಹ್ನ ನಾಲ್ಕು ಗಂಟೆ ಆದಮೇಲೆ ನೀವು ಹೋಗಿ, ಹೋಗಿ ಎಂದರೆ ನಾನು ಹೋಗುವುದಿಲ್ಲ ಎಂದಿದ್ದಾರೆ. ನಂತರ ನೀವು ಬರೆದುಕೊಡಿ ನೀವು ಹೋಗಿ ಎಂದು ಹೇಳಿದಾಗ ಪೊಲೀಸರು ಬರೆದುಕೊಟ್ಟರೂ ಸಹ ಇಲ್ಲಾ ನಾವು ಇಲ್ಲೇ ಕುಳಿತುಕೊಳ್ಳುತ್ತೇವೆ ಎಂದಿದ್ದಾರೆ. ಅವರು ಅಲ್ಲಿ ಪೊಲೀಸ್ ಸ್ಟೇಷನ್ನಲ್ಲಿ ಅಧಿಕಾರಿಗಳನ್ನು ಬಯ್ಯತಕ್ಕಂಥಾದ್ದು ಮತ್ತು ಬಂದೂಕು ಇರತಕ್ಕಂಥ ಜಾಗಕ್ಕೆ ಹೋಗತಕ್ಕಂಥಾದ್ದು ಅಸಭ್ಯ ರೀತಿಯಲ್ಲಿ ನಡೆದುಕೊಂಡಿರತಕ್ಕಂಥಾದ್ದು ಇದೆಲ್ಲಾ ವೈ.ಕೆ. ರಾಮಯ್ಯನವರು ಮಾಡಿದ್ದಾರೆ ಎಂದು ಪೊಲೀಸರು ಹೇಳಿರುವುದು. ಅವರಿಗೆ ಬ್ಲಡ್ ಪ್ರೆಷರ್ ಇದೆ. ಮತ್ತು ಶುಗರ್ ಪೇಷಂಟ್. ಅದಕ್ಕೆ ನಮಗೂ ಭಯ ಇದೆ. ಅವರು ಈ ರೀತಿ ಧರಣಿ ಮಾಡಿದ್ದರಿಂದ ಅವರ ವಿಚಾರವನ್ನು ವ್ಯಕ್ತ ಮಾಡುವುದರಲ್ಲಿ ನಮಗೆ ಏನೂ ತಕರಾರಿಲ್ಲ. ಇಲ್ಲಾ ನೀವು ಕೋರ್ಟಿಗೆ ನಮ್ಮನ್ನು ಪ್ರೊಡ್ಯೂಸ್ ಮಾಡಬೇಕು ಎಂದು ಹೇಳಿದ್ದಾರೆ. ಮಾರನೇ ದಿನ ಯುಗಾಗಿ ಹಬ್ಬ ಇದೆ. ನ್ಯಾಯಾಧೀಶರ ಹತ್ತಿರ ಕರೆದುಕೊಂಡು ಹೋಗಿದ್ದಾರೆ. ನ್ಯಾಯಾಧೀಶಕರು ರಜೆ ಮೇಲೆ ಇದ್ದರು. ಆಮೇಲೆ ಕೇಸ್ ಹಾಕಿದ್ದಾರೆ. ಸೆಲ್ಫ್ ಬಾಂಡ್ ಕೊಟ್ಟು ಹೋಗಿ ಎಂದು ಪೊಲೀಸ್ ಸ್ಟೇಷನ್ನಲ್ಲಿ ಹೇಳಿದ್ದಾರೆ. ಯಾವಾಗ ಇದೆಲ್ಲಾ ಮಾಡಿದರು ಆಗ ಬಾಂಡ್ ಮೇಲೆ ಬರೆದುಕೊಡಿ ಎಂದು ಹೇಳಿದ್ದಾರೆ. ಇಲ್ಲಾ, ನಾನು ಸೆಲ್ಫ್ ಬಾಂಡ್ ಬರೆದುಕೊಡುವುದಿಲ್ಲ ಎಂದು ಹೇಳಿದ್ದಾರೆ.

1.20 ಪಿ.ಎಂ

ನಂತರ ಅವರನ್ನು ಮ್ಯಾಜಿಸ್ಟೇಟ್ ಹತ್ತಿರ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ನಾನು ಏನು ಅಪರಾಧ ಮಾಡಿದ್ದೇನೆ. ತುಮಕೂರಿಗೆ ನೀರು ಕೊಡಿ ಎಂದು ಕೇಳುವುದು ತಪ್ಪಾ ಎಂದು ಅಲ್ಲಿ ವಾದ ಮಾಡಿದ್ದಾರೆ. ನೀವು ನನ್ನನ್ನು ಜೈಲಿಗೆ ಹಾಕಲೇ ಬೇಕು, ಎಲ್ಲಿಯವರೆಗೂ ತುಮಕೂರಿಗೆ ನೀರು ಕೊಡುವುದಿಲ್ಲವೋ ಅಲ್ಲಿಯವರೆಗೂ ನಾನು ಜೈಲಿನಲ್ಲೇ ಇರುತ್ತೇನೆಂದು ಹೇಳಿದ್ದಾರೆ. ಆಗ ನ್ಯಾಯಧೀಶರಿಗೆ ಬೇರೆ ದಾರಿನೇ ಇರಲಿಲ್ಲ. ನ್ಯಾಯಾಧೀಕರಣ ಅವರನ್ನು ಜೈಲಿಗೆ ಕರೆದುಕೊಂಡು ಹೋಗಿದ್ದಾರೆ. ಜೈಲಿನಲ್ಲಿ ಅವರು ಇದ್ದರೆ ಸ್ವಾಮಿ, ನನಗೊ ಒಂದು ಪತ್ರವನ್ನು ಅಲ್ಲಿಂದ ಬರೆದಿದ್ದಾರೆ. ನಿಮ್ಮ ಸರ್ಕಾರಕ್ಕೆ ಒಂದು ಒಳ್ಳೆಯ ಕಾರನ್ನು ಕೊಡುವುದಕ್ಕೆ ಹಣಕಾಸಿನ ಯೋಗ್ಯತೆ ಇಲ್ಲವಾ? ಎಂದು ಒರೆದಿದ್ದಾರೆ. ಅವರು ಪ್ರತಿ ದಿನ ಆಸ್ಪತ್ರೆಗೆ ಹೋಗಬೇಕಂತೆ, ಅವರಿಗೆ ರಕ್ತದೊತ್ತಡ ಮತ್ತು ಸಕ್ಕರೆ ಖಾಯಿಲೆ ಇದೆ.

ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಸರ್ಕಾರದ ಕರ್ತವ್ಯ, ಕರೆದುಕೊಂಡು ಹೋಗುತ್ತೇವೆಂದರೆ, ಅವರಿಗೆ ಒಳ್ಳೆಯ ಕಾರು ಬೇಕಂತೆ, ಒಳ್ಳೆಯ ಕಾರು ಕೊಡುವುದಿಲ್ಲವೂ, ಎಂದು ಕಾಗದ ಬರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಯಾರ ಜೊತೆ ಕರೆದುಕೊಂಡು ಹೋಗುತ್ತಿರಾ ಎಂದರೆ ಕಳ್ಳರ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಕಳ್ಳರ ಜೊತೆಯಲ್ಲಿ ಕರೆದುಕೊಂಡು ಹೋಗಿಲ್ಲ. ಇದು ಸತ್ಯಕ್ಕೆ ದೂರವಾದಂತಹ ವಿಷಯವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಜೈಲಿನಲ್ಲಿ ಅದಂತಹ ಅನುಭವ, ನಮಗೇನೂ ಬೆಂಜ್ ಕಾರು ಕೊಡುವುದಿಲ್ಲ. ಅಲ್ಲಿ ಕೋರ್ಟಿಗೆ ಕರೆದುಕೊಂಡು ಹೋಗುವಂತಹ ಖೈದಿಗಳು, ಖೋಟ ನೋಟು ಪ್ರಿಂಟ್ ಮಾಡಿದ ಖೈದಿಗಳು, ಮರ್ಡರ್ ಮಾಡಿದಂತಹ ಖೈದಿಗಳು, ಇವರೆಲ್ಲರನ್ನು ಕರೆದುಕೊಂಡು ಹೋಗುವಂತಹ ವ್ಯಾನ್ನಲ್ಲಿ ನಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಆದ್ದರಿಂದ ಮಾನ್ಯ ವೈ.ಕೆ. ರಾಮಯ್ಯನವರು ಬೇರೆ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳಿರಬಹುದು. ನನ್ನ ಅನುಭವಕ್ಕೆ ಬಂದದ್ದನ್ನು ನಾನು ಹೇಳುತ್ತಿದ್ದೇನೆ. ಇದು ನನ್ನ ಅನುಭವ. ಈ ಬಗ್ಗೆ ನಾನು ಏನೂ ಕೇಳುವುದಕ್ಕೆ ಹೋಗುವುದಿಲ್ಲ. ಇದು ನಮ್ಮ ಕ್ರಮ. ಅದಕ್ಕೆ ನಾವು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ ಮತ್ತು ನಮ್ಮ ನೀತಿ. ತಪ್ಪು ಏನಿಲ್ಲ, ಅದಕ್ಕೋಸ್ಕರ ನಾವು ಗೃಹ ಸಚಿವರನ್ನು ಕಾರು ಕೊಡಿ ಎಂದು ಕೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಿಂಧ್ಯಾರವರು ಜೈಲಿನಲ್ಲಿದ್ದರು. ಅವರು ಸಹ ಬಹಳ ವರ್ಷಗಳು ಜೈಲಿನಲ್ಲಿದ್ದರು. ಅಲ್ಲಿನ ಪರಿಸ್ಥಿತಿ ಮತ್ತು ವ್ಯವಸ್ಥೆಗಳ ಬಗ್ಗೆ ಅವರಿಗೂ ಗೊತ್ತಿದೆ. ಅಲ್ಲಿ ದೊಡ್ಡವರು ಚಿಕ್ಕವರು ಎಂಬ ಪ್ರಶ್ನೆ ಇಲ್ಲ, ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿರಬೇಕು. ಅದಕ್ಕೆ ಅವರು ಕಾರು ಕಳುಹಿಸಿ ಎಂದು ಹೇಳಿರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಮಗೆ ಯಾವ ರೀತಿ ಪತ್ರ ಬರೆದಿದ್ದಾರೆ, ಸರ್ಕಾರಕ್ಕೆ ಯಾವ ರೀತಿ ಪತ್ರ ಬರೆದಿದ್ದಾರೆ ಎಂದು ನಾವು ತೋರಿಸಬೇಕಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಸಲ ಜೈಲಿಗೆ ಹೋಗಿರಬಹುದು; ನಾನು ಸಹ ಹಲವಾರು ಸಲ ಹೋಗಿದ್ದೇನೆ. 21 ತಿಂಗಳುಗಳ ಕಾಲ ನಾನು ಜೈಲಿನಲ್ಲಿದ್ದೆ. ಜೈಲ್‌ಗಳಲ್ಲಿ ಶಾಸಕರು, ಲೋಕಸಭಾ ಸದಸ್ಯರು, ಇವರಿಗೆ ಕೆಲವು ಸವಲತ್ತುಗಳು ಇವೆ. ಜೈಲ್ ಮ್ಯಾನ್ಯುಲ್ ಇದೆ. ಅದರ ಪ್ರಕಾರ ಒಬ್ಬ ನಾಗರಿಕನಿಗೆ ಏನೇನು ಸೌಲಭ್ಯ ಕೊಡಬೇಕು. ಅದೆಲ್ಲಾ ಸೌಲಭ್ಯಗಳನ್ನು ನಾವು ಕೊಟ್ಟಿದ್ದೇವೆ. ಅವರು ಅಲ್ಲಿ ನಾನು ಊಟ ಮಾಡುವುದಿಲ್ಲ, ಎನ್ನುತ್ತಾರೆ. ಆಸ್ಪತ್ರೆಗೆ ಹೋದರೆ ಅಲ್ಲಿ ವೈದ್ಯರ ಮೇಲೆ ರೇಗಾಡುತ್ತಾರೆ. ಪೊಲೀಸ್‌ನವರ ಮೇಲೆ ರೇಗಾಡುತ್ತಾರೆ. ಮಾನ್ಯ ರಾಮಯ್ಯನವರು ನನಗೆ ಒಳ್ಳೆಯ ಸ್ನೇಹಿತರು ಆಗಿದ್ದಾರೆ.

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಈ ರೀತಿಯಾಗಿ ಮಾಡುವುದರಿಂದ ದಯಮಾಡಿ ಕಾಲ ವ್ಯಯ ಮಾಡುವಂಥಾದ್ದು ಬೇಡ. ಅವರು ಉದ್ದೇಶ ಪೂರ್ವಕವಾಗಿ ಪತ್ರಿಕೆಗಳಲ್ಲಿ ನನ್ನ ಹೆಸರು ಬರಬೇಕು ಎನ್ನುವಂತಹ ಮಾನಸಿಕವಾಗಿ ಅಸ್ತವ್ಯಸ್ತವಿದ್ದರೂ ಇರಬಹುದು. ಅದಕ್ಕೂ ಕೂಡ ತಾವು ಕ್ರಮ ತೆಗೆದುಕೊಳ್ಳಬೇಕು. ಅವರನ್ನು ಮೆಂಟಲ್ ಆಸ್ಪತ್ರೆಗೆ ಕಳುಹಿಸಿ ತಪಾಸಣೆ ಮಾಡಿಸುವಂತಹ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಶ್ರೀ ವೈ.ಕೆ. ರಾಮಯ್ಯನವರಿಗೆ ತೊಂದರೆಯನ್ನು ಕೊಡಬೇಕು. ಅವರು ಮುಷ್ಕರ ಮಾಡುವುದು ತಪ್ಪೆಂದು ಸರ್ಕಾರ ಎಲ್ಲೂ ಸಹಿತ

ಹೇಳಿಲ್ಲ. ನಾನು ಅವರು ಇಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದು ಕೊಂಡು ಗೃಹಮಂತ್ರಿಯಾಗಿ ಅವರ ಆರೋಗ್ಯದ ಬಗ್ಗೆ ನನಗೂ ಒಂದು ರೀತಿಯ ಕಳವಳವಿದೆ. ಅವರಿಗೆ ರಕ್ತದೊತ್ತಡ, ಸಕ್ಕರೆ ಖಾಯಿಲೆ ಇರುವುದರಿಂದ ಅವರಿಗೆ ಹೆಚ್ಚು ಕಡಿಮೆಯಾದರೆ ಏನು ಮಾಡುವುದು. ಅವರು ಈ ರಾಜ್ಯದ ನಾಯಕರು ಒಂದು ಜವಾಬ್ದಾರಿ ಪಕ್ಷದ ಅಧ್ಯಕ್ಷರು ಆಗಿದ್ದಾರೆ. ಅವರ ಬಗ್ಗೆ ಲಘುವಾಗಿ ಪರಿಗಣಿಸುವುದಕ್ಕೆ ನಾವು ತಯಾರಿಲ್ಲ. ಈಗ ಅವರು ನಾನೇ ಜೈಲಿಗೆ ಹೋಗುತ್ತೇನೆ. ಪೊಲೀಸ್ ಸ್ಟೇಷನ್‌ನಲ್ಲಿ ಜೈಲಿನಲ್ಲಿ ಊಟ ಮಾಡುವುದಿಲ್ಲ. ನನಗೆ ಔಷಧ ಬೇಡ, ತುಮಕೂರಿಗೆ ನೀರು ಕೊಟ್ಟುಬಿಡಿ ಎಂದರೆ ಜೈಲಿನಲ್ಲೇ ಇರುತ್ತೇನೆಂದರೆ ಹೇಗೆ? ಪೊಲೀಸ್ ಸ್ಟೇಷನ್‌ನಲ್ಲಿ ಇವರು ಮಾಡಿರುವಂತಹ ವರ್ತನೆಯ ದೃಷ್ಟಿಯಿಂದ ನಾವು ಪೊಲೀಸಿನವರಿಗೂ ಕೇಳಿಕೊಂಡಿದ್ದೇವೆ. ಪೊಲೀಸಿನವರಿಗೂ ಗೊತ್ತಿದೆ. ಇವತ್ತು ನಾವು ಅಧಿಕಾರದಲ್ಲಿರುತ್ತೇವೆ ನಾಳೆ ನೀವು ಬರಬಹುದು ಎಂದು ಅವರು ಎಲ್ಲರ ಜೊತೆಯಲ್ಲಿ ಸೌಜನ್ಯದಿಂದ ನಡೆದುಕೊಳ್ಳುತ್ತಾರೆ. ಇವರಿಗೆ ವಿಶೇಷವಾದ ಸೌಜನ್ಯದಿಂದ ನಡೆದುಕೊಳ್ಳಬೇಕು ನಾವು ಸೂಚನೆಯನ್ನು ಸಹ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರಿಗೂ ಮಾನ್ಯ ವೈ.ಕೆ. ರಾಮಯ್ಯನವರಿಗೂ ರಾಜಕೀಯವಾಗಿ ದ್ವೇಷವಿದೆ ಎಂದು ಹೇಳುವುದು ಆ ದೃಷ್ಟಿಯಿಂದ ಇಲ್ಲ. ನಾನು ನಿನ್ನೆ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಯಾವುದೇ ರಾಗ, ದ್ವೇಷ ಇಲ್ಲ. ಇವತ್ತು ಸಹ ನಾನು ಮಾನ್ಯ ರಾಮಯ್ಯನವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅವರನ್ನು ಕೋರ್ಟ್ ಮುಂದೆ, ಪ್ರೊಡ್ಯೂಸ್ ಮಾಡುತ್ತಾರೆ. ದಯಮಾಡಿ ಸೆಲ್ಫ್ ಬೆಲ್ ತೆಗೆದುಕೊಂಡು ಹೋಗಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರು ತಮ್ಮ ಮೇಲೆ ನಾಲ್ಕು ಕಟ್ಟಳೆಗಳನ್ನು ಹಾಕಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅವರು ಪ್ರಾಣ ಬೆದರಿಕೆಯನ್ನು ಯಾರಿಗೆ ಹಾಕಿದರು? ಅದು ಬೇಕಲ್ಲಾ, ಸುಮ್ಮನೆ ನೀವು ಕೇಸ್ ಹಾಕಿಬಿಟ್ಟರೆ, ನುಗ್ದಿದರು, ಹೊಡೆಯುವುದಕ್ಕೆ ಹೋದರು ಎಂದರೆ ಹೀಗೆ? ಅದುದರಿಂದ ದಯಮಾಡಿ ತಾವು ಆತ್ಮಶೋಧನೆ ಮಾಡಿಕೊಳ್ಳಿ. ಅವರನ್ನು ಜೈಲಿಗೆ ಕಳುಹಿಸುವುದು ಬಿಡಿಸುವುದು ಆ ಪ್ರಶ್ನೆ ಬೇರೆ. ಇಂಥವರಿಗೆ ಪ್ರಾಣ ಬೆದರಿಕೆ ಹಾಕಿದರು ಎಂಬುದು ನಮಗೆ ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ಏನು ಶಬ್ದಗಳನ್ನು ಉಪಯೋಗಿಸಿದ್ದಾರೆಂದರೆ ನನ್ನ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆ ಮತ್ತು ಅಧಿಕಾರಕ್ಕೆ ಧಕ್ಕೆ ಬರುತ್ತದೆ ಎಂದು ಅವರು ಉಪಯೋಗಿಸಿದಂತಹ ಭಾಷೆಯನ್ನು ಕೇಳಿದಾಗ ಬಹಳ ನೀಚವಾಗಿ ಮಾತನಾಡಿದ್ದಾರೆ. "I will take care of your Home Minister; I will see who is your Chief Minister" ಅಂತ ಹೀಗೆಲ್ಲಾ ಹೇಳಿದ ಮೇಲೂ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ದೊಡ್ಡ ಅಪರಾಧ ಮಾಡಿದ್ದಾರೆಂದು ಸರ್ಕಾರವಂತೂ ಹೇಳಿಲ್ಲ. ನಾನೇ ಜೈಲಿಗೆ ಹೋಗುತ್ತೇನೆ. ನೀರು ಕೊಡುವವರೆಗೂ ನಾನು ಜೈಲಿನಿಂದ ಹೊರಗೆ ಬರುವುದಿಲ್ಲವೆಂದರೆ ನಾವು ಏನು ಮಾಡುವುದು? ಇದು ನಮ್ಮ ಮುಂದಿರುವ ಪ್ರಶ್ನೆ. ಆದರೂ ನಾನು ಭರವಸೆ ಕೊಡುತ್ತಿದ್ದೇನೆ. ಅವರ ಆರೋಗ್ಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಅವರು ಮಾಡುತ್ತಿರುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಮತ್ತೊಮ್ಮೆ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇಷ್ಟು ದೀರ್ಘವಾಗಿ ಉತ್ತರ ಕೊಟ್ಟು ಅದರಲ್ಲಿ ಏನು ಹುರುಳಿಲ್ಲವೆಂದರೆ ವಾಟಾಳ್ ನಾಗರಾಜ್‌ರವರು ಗಂಟಲು ಶೋಷಣೆ ಮಾಡಿಕೊಂಡು ಈಗ ಪರಿಹಾರ ಕಾಣದೆ ಅವರು ಸುಮ್ಮನೆ ವಾಪಸ್ಸು ಹೋಗುವಂತಹ ಪರಿಸ್ಥಿತಿ ಇದೆ. ಇಲ್ಲಿ ಪ್ರಶ್ನೆ ಇರುವುದು ಈ ಕೇಸ್ ಆಯಿತು ವಾಪಸ್ಸು

ತೆಗೆದುಕೊಳ್ಳಿ ಮನೆಗೆ ಹೋಗಿ ಅಂದರೆ ಅವರು ಹೋಗುವುದಿಲ್ಲ. ಅವರನ್ನು ಅರೆಸ್ಟ್ ಮಾಡಿದ್ದಿರಾ, ಕೇಸ್ ದಾಖಲು ಮಾಡಿಕೊಂಡಿದ್ದೀರಿ. ನೀವು ಅವರನ್ನು ಕಳುಹಿಸುವಂತಹ ಸಂದರ್ಭ ಬಂದಿದೆ. ಇಲ್ಲದಿದ್ದರೆ ಅವರು ಪೊಲೀಸ್ ಸ್ಟೇಷನ್‌ನಲ್ಲೆ ಮಲಗಿಕೊಳ್ಳಲಿ ಅಂದಿದ್ದರೆ ಅವರು ಇರುತ್ತಿದ್ದರು ಇಲ್ಲದಿದ್ದರೆ ತಾವಾಗಿಯೇ ಹೋಗುತ್ತಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಏಕೆ ಇಷ್ಟು ದೀರ್ಘವಾಗಿ ಹೇಳಿಕೆ ಕೊಟ್ಟೆ ಎಂದರೆ ಸರ್ಕಾರ ಏನೊ ಮಾಡುವುದಕ್ಕೆ ಹೋಗುತ್ತಿದೆ. ದೊಡ್ಡ ಅಪರಾಧದ ಹೊರೆಯನ್ನು ಅವರ ಮೇಲೆ ಕೂಡಿಸುವಂತಹ ಭೀತಿ, ಮತ್ತು ಹಾಗೆ ಮಾಡಿದರು ಹೀಗೆ ಮಾಡಿದರು ಎನ್ನುವಂತಹ ಭಾವನೆ ಯಾರಿಗೂ ಬರಬಾರದು. ನಾವು ಇಲ್ಲಿ ಮಾತನಾಡುತ್ತೇವೆ. ನಾಳೆ ದಿವಸ ಪತ್ರಿಕೆಗಳಲ್ಲಿ ವರದಿಯಾಗುತ್ತದೆ, ಆಗ ಸರ್ಕಾರದ ಗೌರವವೇನಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಏನು ಮಾಡಿದೆ ಅಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ನಾನು ಇಲ್ಲಿ ಹೇಳಿದೆ. ಇವತ್ತು ಅವರನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸುತ್ತಿದ್ದಾರೆ. ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಸೆಲ್ಫ್ ಬಾಂಡ್ ಬರೆದುಕೊಟ್ಟು ಅವರು ಹೋಗಬಹುದು. ಅವರ ಚಳುವಳಿಯ ಉದ್ದೇಶವೇನಿದೆ ಹಾಗೂ ಅವರ ಬಗ್ಗೆ ನಿಮಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ನಾವು ಅಧಿಕಾರಕ್ಕೆ ಬಂದು ಇನ್ನೂ ನೂರು ದಿನಗಳು ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಚಳುವಳಿಗೆ ಕುಳಿತುಕೊಂಡಾಗ ಅವರು ಸೆಲ್ಫ್ ಬಾಂಡ್ ಮೇಲೆ ಏಕೆ ಬರುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಉತ್ತರವನ್ನು ಮುಗಿಸಿಲ್ಲ. ನೀವು ಇಂಪೆಸೆಂಟ್ ಆಗುತ್ತಿದ್ದೀರಾ.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲ, ಕೇಸ್‌ಗಳನ್ನು ಹಿಂದೆ ತೆಗೆದುಕೊಳ್ಳುತ್ತೀರಾ,

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಇನ್ನೂ ಪೂರ್ಣವಾಗಿ ಉತ್ತರ ಕೊಟ್ಟಿಲ್ಲ. ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದು ಜನರಿಗೆ ಗೊತ್ತಾಗಬೇಕು. ರಾಮಯ್ಯನವರ ಮೇಲೆ ಯಾವುದೇ ರೀತಿಯ ಆಕ್ರೋಶವಾಗಲೀ ದ್ವೇಷವಾಗಲೀ, ಇಲ್ಲ. ಅವರು ಮಾಡುತ್ತಿರುವಂಥ ಹೋರಾಟ ಇದರ ಬಗ್ಗೆ ಯಾರದೂ ತಕರಾರು ಇಲ್ಲ. ವೈ.ಕೆ. ರಾಮಯ್ಯನವರ ಆರೋಗ್ಯದ ಬಗ್ಗೆ ನಮಗೆ ಬಹಳ ಕಳಕಳಿ ಇದೆ.... ಕುಳಿತುಕೊಳ್ಳಿರಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೆ, ಕೇಸುಗಳನ್ನು ತೆಗೆಯಿರಿ ಅಂದರೆ, ಸುತ್ತಿಬಳಸಿ ಅವರ ಆರೋಗ್ಯ ಚೆನ್ನಾಗಿ ಇದೆ ಎಂದು ಹೇಳುತ್ತಾ ಎಲ್ಲೋ ಹೋಗುತ್ತಿದ್ದಾರೆ. ಇವರು ಕೇಸುಗಳನ್ನು ಹಿಂತೆಗೆದುಕೊಂಡರೆ ತಾನಾಗಿಯೇ ರಾಮಯ್ಯನವರು ಮನೆಗೆ ಬರಬಹುದು, ತೊಂದರೆ ಏನಿಲ್ಲ.

ಶ್ರೀಮತಿ ಎಂ. ಪ್ರಮೀಳಾ ನೇಸರ್ಗಿ : ಒಂದು ನಿಮಿಷ, ಮಾನ್ಯ ಉಪಾಧ್ಯಕ್ಷರೆ, ಈಗ ಸೆಲ್ಫ್ ಬಾಂಡ್ ಬಗ್ಗೆ ತಾವು ಹೇಳಿದಿರಿ, ನಾನು ಹೇಳುತ್ತಿದ್ದೇನೆ, ಈಗ ಈ ಸಭೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸೆಲ್ಫ್ ಬಾಂಡ್ ಕೋರ್ಟಿನಲ್ಲಿ ಏಕೆ ಅಂಥ ಹೇಳಿದರೆ ಅವರು ಇನ್ನೊಂದು ಸಾರಿ ಹಾಜರಾಗಬೇಕು ಎನ್ನುವ ಉದ್ದೇಶದಿಂದ ಬಾಂಡ್ ತೆಗೆದುಕೊಳ್ಳುತ್ತಾರೆ. ಅಂದರೆ ನಿಮಗೆ ವೈ.ಕೆ. ರಾಮಯ್ಯನವರು ಓಡಿಹೋಗಿ ಬಿಡುತ್ತಾರೆ ಎಂಬ ಅನುಮಾನ ಏನಾದರೂ ಇದೆಯೇ? ಅನುಮಾನ ಇಲ್ಲದಿದ್ದ ಮೇಲೆ ಸೆಲ್ಫ್ ಬಾಂಡ್ ಇನ್‌ಸಿಸ್ಟ್ ಮಾಡಬಾರದು, self bond is required only for the purpose of attendance in the court. ದಯವಿಟ್ಟು ನಿಯಮ ತೆಗೆದುನೋಡಿ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಮತ್ತು ಅದರ ವಿಮ್ಸ್ ಅಂಡ್

ಅಬ್ಜೆಕ್ಷನಲ್ಲಿ ಬಾಂಡ್ ಇರತಕ್ಕಂಥದ್ದು ಕೇವಲ ಅಪಿಯರ್‌ನ್ಸ್‌ಗೋಸ್ಕರ. ತಪ್ಪಿಸಿಕೊಂಡು ಹೋಗಬಾರದು ಎಂಬ ಉದ್ದೇಶದಿಂದ, ಆದರೆ ಇವರು ಕಳ್ಳರಲ್ಲ, ಕಾಕರಲ್ಲ, ಸ್ಮಗ್ಲರಲ್ಲ, ವೈ.ಕೆ. ರಾಮಯ್ಯನವರು ಓಡಿಹೋಗುವಂತವರಲ್ಲ, ಅಂತಹವರ ಬಗ್ಗೆ ಸೆಲ್ಫ್ ಬಾಂಡ್ ಕೇಳತಕ್ಕಂಥ ಅವಶ್ಯಕತೆ ಇಲ್ಲ, ಇದರ ಬಗ್ಗೆ ತಾವು ಹೇಳಬೇಕು. ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ರಾಜಕೀಯವಾಗಿ ಅರೆಸ್ಟ್ ಮಾಡಿದವರೆಲ್ಲರಿಗೂ ಕೂಡ ಸೆಲ್ಫ್ ಬಾಂಡ್ ಕೊಡಿ ಎಂದು ಕೇಳತಕ್ಕಂಥದ್ದು ಅಷ್ಟು ಒಳ್ಳೆಯದಲ್ಲ. ಅದರ ಬಗ್ಗೆ ಏನಾದರೂ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆಯೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇಷ್ಟೆಲ್ಲಾ ಗಂಟಲು ಶೋಷಣೆ ಮಾಡಿಕೊಂಡರು ಕೊನೆಗೆ ಪರಿಹಾರ ಏನು ಕಾಣಿಸಲಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಅಧ್ಯಕ್ಷರೆ, ಈಗ ಗಂಭೀರವಾಗಿರತಕ್ಕಂಥ ಪರಿಸ್ಥಿತಿ ತುಮಕೂರು ಜಿಲ್ಲೆಯೊಳಗೆ ಪ್ರಾರಂಭವಾಗಿದೆ, ನಾಳೆಯಿಂದ ರಸ್ತೆ ರೋಕೊ ಮಾಡಬೇಕೆನ್ನುವ ವಿಚಾರ ಜನಗಳ ಮುಂದೆ ಇದೆ, ನೀವೇನಾದರೂ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳದೆ ಸರಿಯಾದ ರೀತಿಯಲ್ಲಿ ಆಶ್ವಾಸನೆ ಕೊಡದೆ ಹೋದರೆ ತುಮಕೂರು ಜಿಲ್ಲೆಯ ಯಾವುದೇ ರಸ್ತೆಯಲ್ಲಿ ಕಾರುಗಳಾಗಲಿ, ಬಸ್ಸುಗಳಾಗಲಿ, ಲಾರಿಗಳನ್ನು ತಡೆಯತಕ್ಕಂಥ ಚಳುವಳಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಜೈಲಿನಲ್ಲಿ ಇರಲಿ, ನೀವು ಅಲ್ಲಿ ಚಳುವಳಿ ಮಾಡಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಅವರು ಚಳುವಳಿ ಮಾಡುತ್ತೇವೆಂದು ನೋಟೀಸನ್ನು ಸಹ ಕೊಟ್ಟಿದ್ದಾರೆ. ದಯಮಾಡಿ ಸಿಂಧ್ಯಾರವರು ವೈ.ಕೆ. ರಾಮಯ್ಯನವರ ಮೇಲೆ ಹಾಕಿರತಕ್ಕಂಥ ಕೇಸುಗಳನ್ನು ವಾಪಸ್ಸು ತೆಗೆದುಕೊಂಡು ಅವರನ್ನು ಬಿಡುಗಡೆ ಮಾಡಬೇಕು, ಎರಡನೆಯದಾಗಿ, ಹೇಮಾವತಿ ನೀರನ್ನು ತುಮಕೂರು ಜಿಲ್ಲೆಗೆ ಒದಗಿಸಲು ತಯಾರಿದ್ದೇವೆ ಎಂದು ಹೇಳುತ್ತಿದ್ದಾರೆ, ಮತ್ತೆ ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬುವುದು ಬಹಳ ಮುಖ್ಯವಾಗಿರತಕ್ಕಂಥದ್ದು. ಇಲ್ಲದಿದ್ದರೆ ನಾಳೆಯಿಂದ ಚಳುವಳಿ ಪ್ರಾರಂಭವಾಗುತ್ತದೆ ನಮ್ಮ ಕಾಂಗ್ರೇಸ್ ಸರ್ಕಾರ ಇದ್ದಿದ್ದರೆ ಹೋದ ತಿಂಗಳು 31ನೇ ತಾರೀಖು ನೀರು ಬಿಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಬಹುಶಃ ಬಹಳಷ್ಟು ಜನರಿಗೆ ಅನೇಕ ಸಮಸ್ಯೆಗಳು ತನ್ನಷ್ಟಕ್ಕೆ ತಾನೇ ಬಗೆಹರಿಯುತ್ತಿತ್ತು. "Penny wise polland foolish" ಅಂತ ಹೇಳುವ ಹಾಗೆ ಕೆಲಸ ಮಾಡುತ್ತಿದ್ದಾರೆ, ಸುಮಾರು ಇವತ್ತು ಕುಡಿಯುವ ನೀರಿನ ಸಮಸ್ಯೆಗೆ ತುಮಕೂರು ಜಿಲ್ಲೆಯೊಳಗೆ ಒಂದು ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದಾರೆ ಅದೆಲ್ಲಾ ನಮ್ಮ ಸರ್ಕಾರ ಇದ್ದಿದ್ದರೆ ಬಗೆಹರಿಯುತ್ತಿತ್ತು. ಇವರು ಅದೇನು ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆದರೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಹೇಮಾವತಿಯ ನೀರು ಇವತ್ತು ಖಂಡಿತ ಬೇಕಾಗುತ್ತದೆ. ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡಲಿ ಅಂತ ನಾನು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿಸುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಸ್ವಂತ ಕ್ಷೇತ್ರದಲ್ಲಿ ಕೊಪ್ಪಳ ನಗರದಲ್ಲಿ ಈ ದಿವಸ ಕುಡಿಯುವ ನೀರಿನ ಅಂಗವಾಗಿ ಚಳುವಳಿ ನಡೆದಿದೆ. ಮಹಿಳೆಯರೆಲ್ಲಾ ಬೀದಿಗೆ ಇಳಿದಿದ್ದಾರೆ ಎಂಬುದನ್ನು ನಾನು ಮಾತನಾಡಬೇಕೆಂದರೆ ನೀವೆಲ್ಲಾ ಬರೀ ನಿಯಮಾವಳಿಗಳನ್ನು ಮಾತನಾಡುತ್ತೀರಾ

ಶ್ರೀ ಕಾಗೋಡು ತಿಮ್ಮಪ್ಪ : ಅವರು ಅವರ ಕ್ಷೇತ್ರದ ವಿಚಾರವನ್ನು ಹೇಳುತ್ತಿದ್ದಾರೆ. ನಾವು ನಮ್ಮದನ್ನು ಹೇಳಿಕೊಳ್ಳುತ್ತೇನೆ, ಅವರಿಗೂ ಕೂಡ ಅವಕಾಶ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂಥ ವಿಚಾರವನ್ನು ಕಳೆದ ಎರಡು ಸಾರಿ ನಿನ್ನೆ ಮತ್ತು ಇವತ್ತು ನಮ್ಮ ಅತ್ಯಂತ ಹಿರಿಯ ಗೌರವಾನ್ವಿತ ಸದಸ್ಯರಾದಂಥ ಶ್ರೀ ವಾಟಾಳ್ ನಾಗರಾಜ್‌ರವರು ಹಾಗೂ ಸ್ನೇಹಿತರು ಒಬ್ಬ ರಾಜಕೀಯ ಮುಖಂಡರ ಬಂಧನದ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡುತ್ತಿದ್ದಾರೆ, ನಾನು ಸಹ 10-15 ನಿಮಿಷ ಆ ಎಲ್ಲಾ ವಿಚಾರವನ್ನು ಕೇಳಿದಾಗ ವೈ.ಕೆ. ರಾಮಯ್ಯನವರು ಉತ್ತರವನ್ನು ಕೊಟ್ಟಿದ್ದಾರೆ, ಈ ಎರಡು ವಿಚಾರದಲ್ಲಿ ಸೆಲ್ಫ್ ಬಾಂಡ್ ಬಗ್ಗೆ ಮಾತ್ರ ನಮ್ಮ ಗೃಹಸಚಿವರು ಪ್ರಸ್ತಾಪ ಮಾಡಿದ್ದಾರೆ ನಾನು ಒಂದು ಘಟನೆಯನ್ನು ಅವರ ಜ್ಞಾಪಕಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆ ಘಟನೆ ಏನೆಂದರೆ ನಮ್ಮ ರೈತ ಸಂಘದ ರಂಗಸ್ವಾಮಿಯವರು ನಾವು ಎಲ್ಲಾ ಕಬ್ಬಿನ ಬೆಲೆ ಕೊಡಬೇಕೆಂದು ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಇದು ನಮ್ಮ ಪುಟ್ಟಣ್ಣಯ್ಯನವರಿಗೆ ಜ್ಞಾಪಕ ಇರಬೇಕು, ಒಂದು ರಾತ್ರಿ, ಒಂದು ಹಗಲು ಆ ಸಂದರ್ಭದಲ್ಲಿ ಮಾನ್ಯ ಜಾಲಪ್ಪನವರು ಮಂತ್ರಿಯಾಗಿದ್ದರು ಆ ಕಾಲದಲ್ಲಿ ಚಳುವಳಿ ಮಾಡಿದೆವು. ಆಗ ನಮಗೂ ಸಹ ಕೇಸ್ ಹಾಕಿದ್ದರು. ನಾವು ಕೋರ್ಟಿಗೆ ಹೋಗಲಿಲ್ಲ, ಜಾಮೀನು ಕೊಡುವುದಿಲ್ಲ ಎಂದು ಹೇಳಿದ್ದೆವು ಆದ್ದರಿಂದ ನಾನು ನಮ್ಮ ಎಲ್ಲಾ ಸದಸ್ಯರ ಭಾವನೆಯನ್ನು ಅರ್ಥಮಾಡಿಕೊಂಡು ವೈ.ಕೆ. ರಾಮಯ್ಯನವರ ವಿಚಾರ ಏನೇ ಇರಲಿ ಒಬ್ಬ ರಾಜಕೀಯ ವ್ಯಕ್ತಿ, ಒಬ್ಬ ಸಾರ್ವಜನಿಕರಿಗೋಸ್ಕರವಾಗಿ ಹೋರಾಟ ಮಾಡುತ್ತಿದ್ದಾರೆಂದು ತಿಳಿದು ಸರ್ಕಾರ ಅವರ ಕೇಸನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ಕೊಡುವ ವಿಷಯ ಈಗ ಚರ್ಚೆಗೆ ಸಂಬಂಧಪಟ್ಟಿರತಕ್ಕಂಥದ್ದು. ಅದಕ್ಕಾಗಿ ಸತ್ಯಾಗ್ರಹ ಮಾಡತಕ್ಕಂಥದ್ದು ಆಯಾವ ರಾಜಕೀಯ ಪಕ್ಷಗಳಿಗೆ, ವ್ಯಕ್ತಿಗಳಿಗೆ ಸಂಬಂಧಪಟ್ಟಿರತಕ್ಕಂಥ ಹಕ್ಕಿನ ಪ್ರಶ್ನೆ. ಅದನ್ನು ಮಾನ್ಯ ಸಚಿವರೂ ಕೂಡ ಒಪ್ಪಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿಗೆ ಇರತಕ್ಕಂಥ ಹಕ್ಕು ಅದು ಅಥವಾ ಪಕ್ಷಕ್ಕೆ ಇರತಕ್ಕಂಥ ವಿಚಾರದಲ್ಲಿ ಮಾನ್ಯತೆ ಮಾಡಿದ್ದಾರೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಯಾವ ಕಡೆಯಿಂದಲೂ ಈ ಸದನದಲ್ಲಿ ಇಲ್ಲ, ಮತ್ತೊಂದು ವಿಷಯ ಅವರು ಮಾಜಿ ಮಂತ್ರಿಗಳು ಆಗಿದ್ದಾರೆ ಎಂಬತಕ್ಕಂಥದ್ದು ಅಲ್ಲವೆನೇ ಒಂದು ಪಕ್ಷದ ಅಧ್ಯಕ್ಷರೂ ಕೂಡ ಆಗಿದ್ದಾರೆ. ಗೌರವಾನ್ವಿತ ವ್ಯಕ್ತಿಯಾಗಿ ಸಾರ್ವಜನಿಕ ಜೀವನದಲ್ಲೂ ಕೂಡ ಅವರು ಇದ್ದಾರೆಂಬ ಅದರ ಬಗ್ಗೆಯೂ ಕೂಡ ಭಿನ್ನಾಭಿಪ್ರಾಯ ಈ ಸದನದಲ್ಲಿ ಯಾವುದೇ ಮೂಲೆಯಿಂದಲೂ ಕೂಡ ಬಂದಿಲ್ಲ. ಮೂರನೆಯ ವಿಷಯ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ, ಸರ್ಕಾರ ಕೂಡ ಮಾನ್ಯ ಸಚಿವರ ಹೇಳಿಕೆ ಮುಖಾಂತರ ಒಪ್ಪಿಕೊಂಡಿದೆ. ಅದು ಅವರ ಆರೋಗ್ಯದ ಬಗ್ಗೆಯೂ ಕೂಡ, ರಕ್ತದ ಒತ್ತಡ, ಸಕ್ಕರೆ ಕಾಯಿಲೆ ಇತ್ಯಾದಿ, ಸಹಜವಾಗಿ ಆ ರೀತಿ ಇದ್ದಾಗ ಸ್ವಲ್ಪ ನಾವು ಯಾವಾಗಲೂ ಕೂಡ ಮಾರ್ಜಿನ್ ಕೊಡತಕ್ಕಂಥದ್ದು. ಅತೀ ಯೋಗ್ಯ ಎಂಬತಕ್ಕಂಥ ಭಾವನೆ ತಮ್ಮ ಹೇಳಿಕೆಯಿಂದಲೇ ನಮ್ಮೆಲ್ಲರಿಗೂ ಕೂಡ ಬಂದಿದೆ. ಆ ಭಾವನೆ ಬರುವ ಹಾಗೆ ತಾವು ಹೇಳಿಕೆಯನ್ನು ಕೊಟ್ಟಿದ್ದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಏಕೆಂದರೆ ವಾಸ್ತವಾಂಶವನ್ನು ಬದಿಗೊತ್ತಿ ಯಾವುದೇ ಹೇಳಿಕೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ಕೂಡ ತಾವು ಮಾಡಿಲ್ಲ, ತಮ್ಮ ಪ್ರಾಮಾಣಿಕತೆಗೆ ನಾನು ಮೆಚ್ಚುತ್ತೇನೆ ಮತ್ತು ಸಾರ್ವಜನಿಕ ಜೀವನದಲ್ಲಿ ಸರ್ಕಾರದ ಪರವಾಗಿ ಹೇಳಿಕೆ ಕೊಡಬೇಕಾದರೆ ಅದನ್ನು ಗಮನದಲ್ಲಿಟ್ಟುಕೊಂಡೇ ಹೇಳಿಕೆ ಕೊಡತಕ್ಕಂಥ ವಿಚಾರ ಕೂಡ ಹೌದು.

ಇವತ್ತು ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಅವರು ಪತ್ರವನ್ನು ಜೈಲಿನಿಂದಲೇ ಬರೆದಿದ್ದಾರೆ. ಸೆಂಟ್ರಲ್ ಜೈಲಿನಲ್ಲಿದ್ದಾರೆ ಎಂಬ ವಿಚಾರ ಅದು ಈಗ ಗೊತ್ತಾಯಿತು.

ನಾವು ಆ ದಿಸೆಯಲ್ಲಿ ವಿಚಾರ ಪ್ರಸ್ತಾಪ ಬಂದಾಗಲೂ ಕೂಡ ಸ್ವಲ್ಪ ಕಾಲ ನಾನು ಇಲ್ಲಿದ್ದೆ. ಜಾಮೀನು ಕೊಟ್ಟು ಹೊರಗೆ ಬರಬಹುದು ಬರಬಾರದು ಅಂತ ಏನಿಲ್ಲ. ಜಾಮೀನನ್ನು ಒಂದೊಂದು ಸಾರಿ ಕೇಳಿದರೆ ನ್ಯಾಯಾಲಯ ಒಪ್ಪಬಹುದು, ಅಥವಾ ಒಪ್ಪದಲೇ ಇರಬಹುದು. ಇಲ್ಲಿರುವ ಅಂಶ ಇಷ್ಟೆ, ಸೆಲ್ಫ್ ಬಾಂಡ್ ಮೇಲೆ ತಮ್ಮ ಸ್ವಯಂ ಮುಚ್ಚಳಿಕೆಯ ಆಧಾರದಮೇಲೆ ಅವರು ಹೊರಗೂ ಕೂಡ ಬರಬಹುದು ಎಂಬ ಭಾವನೆ ನಮಗೂ ಕೂಡ ಒಂದೊಂದು ಸಾರಿ ಬಂದುಬಿಡುತ್ತದೆ, ನಾನೇ ಹೇಳಿದೆ ಅದನ್ನು ಬರೆದುಕೊಟ್ಟು ಹೊರಗಡೆ ಬರುವುದು ಬೇಡವೇ ಇದು ಸಣ್ಣ ವಿಚಾರ. ಇದಕ್ಕೆ ವಿಕಷ್ಟು ತೊಂದರೆ ಎನ್ನತಕ್ಕಂಥದ್ದು. ಮಾನ್ಯ ಸದಸ್ಯರೇಯವರು ಹೇಳಿದ ಹಾಗೆ ನಮಗೆ ಅನಿಸುತ್ತದೆ ಆ ಕಾನೂನಿನಲ್ಲಿ ಏನಿದೆ ಅಂತ ಅಂದರೆ ನನಗೆ ಕೂಡ ಗೊತ್ತಿರುವ ಹಾಗೆ ನಾವೆಲ್ಲ ವಕೀಲರಾಗಿ ಕೆಲಸ ಮಾಡಿರತಕ್ಕಂಥವರು ತಾವು ವಕೀಲರಲ್ಲ ಎಂದು ಕಾಣುತ್ತದೆ. ನೀವು ಇಂಜಿನಿಯರ್ ಆದರೂ ಕೂಡ ನೀವು ಕಾನೂನಿನ ಚೌಕಟ್ಟಿನಲ್ಲೇ ಏನು ಮಾತನಾಡಿದ್ದೀರಿ, ನಾನು ಅದನ್ನು ಬಹಳ ಮೆಚ್ಚುತ್ತೇನೆ. ಇಲ್ಲಿರತಕ್ಕಂಥ ಪ್ರಶ್ನೆ ಸ್ವಯಂ ಮುಚ್ಚಳಿಕೆ ನಾನೇಕೆ ಬರೆದುಕೊಡಬೇಕು, ನಾನು ಹೋರಾಟ ಮಾಡಿದ್ದು ಸಾರ್ವಜನಿಕರ ಒಂದು ವಿಚಾರ, ರೈತರ ಬಗ್ಗೆ ಹೋರಾಟ ಮಾಡಿದ್ದೇನೆ ಎಂಬತಕ್ಕಂಥ ಭಾವನೆ, ಕೆಲವೊಮ್ಮೆ ಆ ವ್ಯಕ್ತಿಗೆ ಬಂದಾಗ ಅದೇ ಪರಿಪಾಠವಾಗಿ ಆದಿತೇನೊ ಎಂಬ ದೃಷ್ಟಿಯಿಂದ ನಿಮ್ಮ ಮನಸ್ಸಿನಲ್ಲಿ ಇದೆ ಎಂದು ನನ್ನ ಭಾವನೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಕೋರ್ಟಿಗೆ ಈಗ ನೀವು ಕೇಸು ದಾಖಲು ಮಾಡಿದ್ದೀರಿ. I don't think any chargesheet is filed against Mr. Y.K. Ramaiah. I think only FIR is filed.

ಇನ್ನೂ ಚಾರ್ಜ್ ಷೀಟ್ ಹಾಕಿಲ್ಲ. ನಾವು ಇನ್ನೂ ಕೂಡ pre-charge sheedingg a person ಸ್ಟೇಜ್‌ನಲ್ಲಿದ್ದೇವೆ. ಅಂದರೆ ಇನ್ನೂ ಎಫ್.ಐ.ಆರ್. ಸ್ಟೇಜ್‌ನಲ್ಲೇ ಪ್ರಕರಣ ಇದೆ. ನಾನು ಹೇಳುವುದೇನೆಂದರೆ ಚಾರ್ಜ್-ಷೀಟ್ ಹಾಕುವುದು ಬಿಡುವುದು ಸರ್ಕಾರಕ್ಕೆ ಬಟ್ಟಿದ್ದು. ಅಥವಾ ಗೃಹ ಇಲಾಖೆಯ ಮುಖಾಂತರ ನೀವೇನು ವಿಚಾರಣೆ ನಡೆಸುತ್ತಿರೋ ಅವರಿಗೆ ಬಿಟ್ಟಿದ್ದು. ನಮ್ಮ ಅಭಿಪ್ರಾಯದಲ್ಲಿ ಇಂತಹ ವಿಚಾರಗಳಿಗೆ ಚಾರ್ಜ್ ಷೀಟ್ ಹಾಕಬಾರದು. ನಾನು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ರೈತ ಸಂಘದವರ ಮೇಲೆ ಹಾಕಿರತಕ್ಕ ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸದನದ ಹಿಂದಿನ ಮಾನ್ಯ ಸದಸ್ಯರಾದ ಪ್ರೊ: ನಂಜುಂಡಸ್ವಾಮಿಯವರು ಕೋರಿದಾಗ, ನಾನು ಅದಕ್ಕೆ ಒಪ್ಪಿಗೆ ಕೊಟ್ಟೆ. ಅಷ್ಟೇ ಅಲ್ಲ ರೈತ ಸಂಘದ ಚಳುವಳಿ. ದಲಿತ ಸಂಘದ ಚಳುವಳಿ ವಿದ್ಯಾರ್ಥಿಗಳ ಚಳುವಳಿ ಅಲ್ಪಸಂಖ್ಯಾಂತರ ಚಳುವಳಿ ನಡೆದಂತಹ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ಅವರುಗಳ ಮೇಲೆ ಇದ್ದ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳು ಕೋರಿದಾಗ, once for all ನಾವು ಆ ಕೇಸ್‌ಗಳನ್ನು ಕ್ಲೋಸ್ ಮಾಡುವುದು ಒಳ್ಳೆಯದು ಎನ್ನುವ ದೃಷ್ಟಿಯಿಂದ ನೂರಾರು ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ನಮ್ಮ ಸರ್ಕಾರ ಆ ಸಂದರ್ಭದಲ್ಲಿ ಒಪ್ಪಿಗೆ ಕೊಟ್ಟಿತು. ಆ ರೀತಿಯಾಗಿ ಹಾಕಿರತಕ್ಕ ಎಲ್ಲಾ ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾವು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದೆವು. ಆದರೆ ಇಲ್ಲಿ ಇನ್ನೂ ಚಾರ್ಜ ಷೀಟೇ ಹಾಕಿಲ್ಲ ಎಫ್.ಐ.ಆರ್. ಸ್ಟೇಜ್‌ನಲ್ಲಿ ಇದೆ. ಚಾರ್ಜ್ ಷೀಟ್ ಹಾಕದೇ ಇರುವುದು ಬಹಳ ಒಳ್ಳೆಯದು. ಒಂದು ವೇಳೆ ನೀವು ಇದಕ್ಕೆ ಒಪ್ಪಿಗೆ ಕೊಟ್ಟರೆ ಎಲ್ಲರೂ ಕೂಡ ಇದೇ ರೀತಿ ಕೇಳಿದರೆ ಚಾರ್ಜ್ ಷೀಟ್ ಹಾಕಬೇಕೇ ಬಿಡಬೇಕೇ ಎಂಬುದು ನಿಮಗೆ ಕಷ್ಟವಾಗುತ್ತದೆ. ನಿಮ್ಮ ಅಭಿಪ್ರಾಯ ನೋಡಿದರೆ ಚಾರ್ಜ್ ಷೀಟ್ ಹಾಕುವ ಲಕ್ಷಣ ನನಗಂತೂ ಕಾಣುತ್ತಿಲ್ಲ.

ಮಾನ್ಯ ರಾಮಯ್ಯನವರಿಗೆ ಬಹಳ ಗೌರವ ಕೊಟ್ಟು ತಾವು ಮಾತನಾಡಿದ್ದೀರಿ. ನಾನೇನು ಹೇಳುತ್ತೇನೆ ಎಂದರೆ ಮಾನ್ಯ ಸದಸ್ಯರಾದ ವಾಟಾಳ್‌ರಾಗಲೀ ನಾಗೇಗೌಡರಾಗಲೀ ಶಿವನಂಜಪ್ಪನವರಾಗಲೀ ಯಾರೇ ಕೇಳಿದರೂ ಕೂಡ ರಾಜಕೀಯವಾಗಿ ಹೋರಾಟ ಮಾಡತಕ್ಕಂಥದ್ದು ಪ್ರಜಾಪ್ರಭುತ್ವದಲ್ಲಿರತಕ್ಕ ಹಕ್ಕಿನ ಪ್ರಶ್ನೆ.ಹಾಗೆ ನೀವು ಚಾರ್ಜ್ ಷೀಟ್ ಹಾಕುತ್ತಾ ಹೋದರೆ ಇದು ಬಹಳ ಕಷ್ಟ ಆಗತಕ್ಕಂತಹ ವಿಚಾರ. ಆದ್ದರಿಂದ ನಾನೇನು ಹೇಳುತ್ತೇನೆ ಎಂದರೆ ಚಾರ್ಜ್‌ಷೀಟ್ ಹಾಕುವುದಕ್ಕೆ ಹೋಗಬಾರದು. ಈ ಒಂದು ಸಲಹೆಯನ್ನು ತಾವು ತೀವ್ರವಾಗಿ ಪರಿಶೀಲನೆ ಮಾಡುತ್ತೀರೆಂದು ನಾನು ಭಾವಿಸುತ್ತೇನೆ. ಒಂದೇ ಸಾರಿ ತಾವು ಚಾರ್ಜ್ ಷೀಟ್ ಹಾಕುವುದಿಲ್ಲ ಎಂದು ಹೇಳಿದರೆ ಬಹಳ ಸಂತೋಷ. ಆದರೆ ಚಾರ್ಜ್ ಷೀಟ್ ಹಾಕುವುದು ಬಿಡುವುದು ನಿಮಗೆ ಬಿಟ್ಟಿರತಕ್ಕದ್ದು. ನೀವು ಅದನ್ನು ಗೌರವಮತಿಯಾಗಿ ಜವಾಬ್ದಾರಿಯದೇ ನೋಡುತ್ತೀರಿ ಎಂದು ನಾನು ಭಾವಿಸಿದ್ದೇನೆ. ಮತ್ತೊಂದು ವಿಚಾರ.ಬಾಂಡ್ ಮೇಲೆ ಬಿಡುಗಡೆ ಮಾಡುವುದು. ತಾವು ಒಪ್ಪಿದರೆ ಸೆಲ್ಫ್ ಬಾಂಡ್ ಮೇಲೂ ಸಹ ಬಿಡುಗಡೆ ಮಾಡಬಹುದು. ಆದರೆ ಚಾರ್ಜ್ ಷೀಟ್ ಹಾಕುವುದಿಲ್ಲ ಎಂದ ಮೇಲೆ ಆ ಪ್ರಶ್ನೆ ಬರುವುದಿಲ್ಲ. ಇವತ್ತು ಮಾನ್ಯ ರಾಮಯ್ಯನವರನ್ನು ನ್ಯಾಯಧೀಶರ ಮುಂದೆ ಹಾಜರು ಮಾಡುತ್ತೇವೆಂದು ತಾವು ನೆನಪು .ಅಥವಾ ಈಗಾಗಲೇ ಹಾಜರುಪಡಿಸಿದ್ದಾರೋ ಏನೋ ಗೊತ್ತಿಲ್ಲ. ಅನಾರೋಗ್ಯದ ಕಾರಣದ ಮೇಲೆ ಅವರನ್ನು ಬಿಡುಗಡೆ ಮಾಡಲಿಕ್ಕೆ ತಾವು ಒಪ್ಪಿಗೆ ಕೊಟ್ಟರೆ ಸಾರ್ವಜನಿಕ ಜೀವನದಲ್ಲಿ ಹೋರಾಟ ಮಾಡತಕ್ಕ ಒಬ್ಬ ವ್ಯಕ್ತಿಗೆ ಗೌರವವನ್ನು ಕೊಟ್ಟ ಹಾಗುತ್ತದೆ. ಅದು ನನ್ನ ಅನಿಸಿಕೆ. ಅಂತಿಮ ತೀರ್ಮಾನ ಸರ್ಕಾರಕ್ಕೆ ಬಿಟ್ಟಿದ್ದು. ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದಕ್ಕಾಗಿ ಮಾನ್ಯ ಉಪ ಸಭಾಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ಒಂದು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಳ್ಳಲಿಕ್ಕೆ ಸರ್ಕಾರ ತಯಾರಿಲ್ಲ ವಾಸ್ತವಾಂಶಗಳನ್ನು ನಡೆದಿರತಕ್ಕ ವಿಚಾರಗಳನ್ನು ಈ ಸದನದ ಮುಂದೆ ಇಡತಕ್ಕದ್ದು. ಈ ಸ್ಥಾನದಲ್ಲಿ ಕುಳಿತುಕೊಂಡ ನನ್ನ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಮಾನ್ಯ ಸದಸ್ಯರಾದ ಜಿ.ಎಸ್. ಶಿವನಂಜಪ್ಪನವರು ತುಮಕೂರಿನಲ್ಲಿ ಕೆಲಸಗಳು ಪ್ರಾರಂಭ ಆಗಬೇಕೆಂದು ಹೇಳಿದರು. ಅದನ್ನು ಆದಷ್ಟು ತೀವ್ರವಾಗಿ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕ ಭರವಸೆಯನ್ನು ಕೊಟ್ಟು ಸದನ ಅತ್ಯಂತ....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ತುಮಕೂರಿನಲ್ಲಿ ಮಾತ್ರ ಟೆಂಡರ್ ಕರೆದು ಕೆಲಸ ಶುರು ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಊರಿನಲ್ಲಿ ಏಕೆ ಟೆಂಡರ್ ಕರೆಯುವುದಿಲ್ಲ? ಸಾರ್ವಜನಿಕ ಕೆಲಸಗಳು ಎಂದರೆ ಎಲ್ಲಾ ಕಡೆ ಒಂದೇ ರೀತಿ ಇರಬೇಕು.

(ಗೊಂದಲ)

ಉಪಾಧ್ಯಕ್ಷರು : ಈಗ ಸದನದ ಮುಂದೆ ಚರ್ಚಿಸತ್ತಿರುವ ವಿಷಯ ಮಾನ್ಯ ವೈ.ಕೆ. ರಾಮಯ್ಯನವರ ಬಿಡುಗಡೆ ಬಗ್ಗೆ. ಟೆಂಡರ್ ಬಗ್ಗೆ ಅಲ್ಲ. ಮತ್ತೆ ಆ ವಿಷಯವನ್ನು ಬೆಳೆಸುವುದಕ್ಕೆ ಹೋಗಬೇಡಿ. ಅದನ್ನು ಒಂದು ಸೀಮಿತವಾಗಿ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ವಿಷಯಾಂತರ ಮಾಡಲಿಕ್ಕೆ ಹೊರಟಿದ್ದಾರೆ. ಆದರೆ ನಾನು ಅದಕ್ಕೆ ತಯಾರಿಲ್ಲ. ನಾನು ಸರ್ಕಾರದ ಸ್ಪಷ್ಟವಾದ ನಿರ್ಧಾರಗಳನ್ನು ಹೇಳುತ್ತಿದ್ದೇನೆ. ಎಷ್ಟೇ ಹಣಕಾಸಿನ ತೊಂದರೆ ಇದ್ದರೂ ನೀರಾವರಿ ವಿಚಾರದಲ್ಲಿ ಕಾಮಗಾರಿಗಳನ್ನು

ತ್ವರಿತವಾಗಿ ಪ್ರಾರಂಭಿಸುತ್ತೇನೆ. ಅದು ಟೆಂಡರ್ ಕರೆಯುವುದೋ ಆರ್‌ಬಿಟ್ರೇಷನ್‌ನೋ ಮತ್ತೊಂದೋ ಇರಬಹುದು. ಮಾನ್ಯ ಗೌರವಾನ್ವಿತ ಸದಸ್ಯರುಗಳಾದ ವಾಟಾಳ್ ನಾಗರಾಜ್, ನಂಜೇಗೌಡರು, ಪ್ರಮೀಳಾ ನೇಸರ್ಗಿಯವರು, ನಾಗೇಗೌಡರು, ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ತಮ್ಮ ತಮ್ಮ ಭಾವನೆಗಳನ್ನು ಸದನದಲ್ಲಿ ವ್ಯಕ್ತ ಮಾಡಿದ್ದಾರೆ. ಈ ಪ್ರಕರಣವನ್ನು ಒಂದು ದೊಡ್ಡ ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡು, ಇದರ ಬಗ್ಗೆ ಒಂದಿಷ್ಟು ಚರ್ಚೆ ಮಾಡಿ ಅವರಿಗೆ ದೊಡ್ಡ ಶಿಕ್ಷೆ ಕೊಡಿಸಬೇಕೆಂಬ ಉದ್ದೇಶವೇನೂ ಸರ್ಕಾರಕ್ಕಿಲ್ಲ. ಮಾನ್ಯ ರಾಮಯ್ಯನವರಿಗೆ ಕೈ ಮುಗಿದು ಹೇಳಿದ್ದಾರೆ ನಾಳೆ ಯುಗಾದಿ ಹಬ್ಬ ಇದೆ. ಮನೆಗೆ ಹೋಗಿ ಹಬ್ಬ ಆಚರಿಸಿ ಎಂದು ಆದರೂ ಅವರು ಇಲ್ಲ ನಾನು ಮನೆಗೆ ಹೋಗುವುದಿಲ್ಲ.

ಜೈಲಿಗೆ ಹೋಗಬೇಕು ಎಂದರೆ ಏನು ಮಾಡುವುದು. ಪೋಲೀಸ್ ಸ್ಟೇಷನ್‌ನಲ್ಲೂ ಅವರನ್ನು ಮನೆಗೆ ಹೋಗುವಂತೆ ಕೋರಿದ್ದಾರೆ. ಆದರೂ ಅವರು ಮಾತು ಕೇಳಲಿಲ್ಲ. ಇಷ್ಟೆಲ್ಲಾ ಹೇಳಿದ ಮೇಲೂ ಮಾನ್ಯ ವೈ.ಕೆ. ರಾಮಯ್ಯನವರನ್ನು ಮನವೊಲಿಸುವ ವಿಶ್ವಾಸ ನನಗಿಲ್ಲ. ನಿಮಗೆ ಹೇಳಬೇಕೆಂದರೆ ಒಂದು ರೀತಿಯಲ್ಲಿ ಅವರು ಒಂದು ತರಹ ಮನುಷ್ಯ. ಅದರ ಬಗ್ಗೆ ನಾನು ಇಲ್ಲಿ ಹೇಳಿದರೆ ತಪ್ಪಾಗುತ್ತದೆ. ಆದ್ದರಿಂದ ನಾನೇನೂ ಹೇಳಲಿಕ್ಕೆ ಹೋಗುವುದಿಲ್ಲ, ಮಾನ್ಯ ರಾಮಯ್ಯನವರನ್ನು ಕುಣಿಗಲ್‌ಗೋ ಮನೆಗೋ ವಾಪಸ್ ಕಳುಹಿಸಲಿಕ್ಕೆ ಪ್ರಾಮಾಣಿಕವಾಗಿ ಏನು ಮಾಡಬೇಕೋ ಅದನ್ನು ಆದ್ಯತೆ ಮೇಲೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಚರ್ಚೆ ಸಾಕು. ಸಭೆಯನ್ನು ಈಗ ಮುಂದಕ್ಕೆ ಹಾಕುತ್ತಿದ್ದೇನೆ. ಮತ್ತೆ ಸಭೆ 2-45 ಕ್ಕೆ ಸೇರುತ್ತದೆ.

(ಸದನವು 1-46 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2.45ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆ ಪುನಃ 3-10 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು ಶ್ರೀ ರಮೇಶ್‌ಕುಮಾರ್ ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಸಭೆಯನ್ನು ಇನ್ನೂ ಅರ್ಧಗಂಟೆ ಮುಂದೆ ಹಾಕಬೇಕಾಗಿತ್ತು. ಏಕೆಂದರೆ ಇಲ್ಲಿ ಮಂತ್ರಿಗಳೇ ಇಲ್ಲ. ಇಬ್ಬರು ರಾಜ್ಯಮಂತ್ರಿಗಳೂ ಮಾತ್ರ ಇದ್ದಾರೆ.

ಅಧ್ಯಕ್ಷರು : ಬರುತ್ತಾರೆ, ಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ಇದರ ಬಗ್ಗೆ ತಾವು ಕೊನೆಯ ತೀರ್ಪನ್ನು ಹೇಳಬೇಕಾಗುತ್ತದೆ. ಆಡಳಿತಪಕ್ಷವಾಗಲೀ, ವಿರೋಧ ಪಕ್ಷವಾಗಲೀ, ಚರ್ಚೆ ನಡೆಯುವಾಗ ಮಂತ್ರಿಗಳು ಇರಬೇಕು.

ಶ್ರೀ ಎಂ. ನಾರಾಯಣ ಸ್ವಾಮಿ : ಇಬ್ಬರು ಮಂತ್ರಿಗಳು ಇದ್ದಾರಲ್ಲ. ನಾಗರಾಜಯ್ಯನವರು ಇದ್ದಾರೆ, ಮಿರಾಜುದ್ದೀನ್ ಅವರು ಇದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅರ್ಧಮಂತ್ರಿಗಳು ಇಬ್ಬರು ಇದ್ದಾರೆ. ಪೂರಾ ಮಂತ್ರಿಗಳು ಯಾರೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಿ ಏನಾದರೂ ಚಕಮಕಿ ನಡೆದರೆ ಆಗ ಏನು ಮಾಡಬೇಕು? ಆಗ ಸರ್ಕಾರದ ಪರವಾಗಿ ಉತ್ತರ ಕೊಡುವವರು ಯಾರು?

ಶ್ರೀ ಡಿ. ನಾಗರಾಜಯ್ಯ : ಏನಾದರೂ ಚಕಮಕಿಯಾದರೆ ನಾವಿಬ್ಬರು ಇದ್ದೇವೆ. ಸಾರುಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ : ಏನೂದರೂ ಹೆಚ್ಚು ಕಡಿಮೆಯಾದರೆ ಅವರು ಇದ್ದಾರೆ. ನೀವು ಹೆದರಿಕೊಳ್ಳುವುದು ಬೇಡ.

ಅಧ್ಯಕ್ಷರು : ಶರಣಪ್ಪನವರೇ ನೀವು ಶುರುಮಾಡಿ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ಪ್ರಸ್ತಾಪದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಕೆ. ಶರಣಪ್ಪ (ಕುಷ್ಟಗಿ) : ಮಾನ್ಯ ಅಧ್ಯಕ್ಷರೇ, ಮಾರ್ಚ್ 20ರಂದು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಾಕಷ್ಟು ಹಿರಿಯ ಸದಸ್ಯರು ಪಾಲ್ಗೊಂಡು ಸಾಕಷ್ಟು ವಿಷಯಗಳನ್ನು ಅವರ ಭಾಷಣದ ಬಗ್ಗೆ ಮಾತನಾಡಿದ್ದಾರೆ. ಹಿರಿಯ ಸದಸ್ಯರು ಕೆಲವರು ವಿಷಯಗಳನ್ನು ಅವರ ಬಗ್ಗೆ ಮಾತನಾಡಿದ್ದಾರೆ. ಹಿರಿಯ ಸದಸ್ಯರು ಕೆಲವರು ರಾಜ್ಯಪಾಲರ ಭಾಷಣದ ಮೇಲೆ ಕಾಣಿಸಲಾದ ನೀತಿ ನಿರೂಪಣೆ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಕೆಲವರು ಸಹ ವಿರೋಧ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಸಾಕಷ್ಟು ಮೆಚ್ಚಗೆಯನ್ನು ವ್ಯಕ್ತಮಾಡಲಾಗದೆ ಟೀಕೆ ಟಿಪ್ಪಣಿಗಳನ್ನು ಸಹ ಮಾಡಿದ್ದಾಗಿದೆ. ವಾಸ್ತವವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ನೀತಿ ನಿರೂಪಣೆ ಬಗ್ಗೆ ಬಹಳ ಒಳ್ಳೆಯ ಮಹತ್ವದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆತ. ನಾನು ಒಂದೊಂದಾಗಿ ಅವುಗಳನ್ನು ವಿವರಿಸುವುದಕ್ಕೆ ಹೋಗದೆ ಸಂಕ್ಷಿಪ್ತವಾಗಿ, ಎಲ್ಲರೂ ಹೇಳಿದ್ದಕ್ಕಿಂತ ಬೇರೆಯಾಗಿ ಒಂದು ಸಲಹೆಯ ಜೊತೆಗೆ ಹೇಳುವುದಾದರೆ, ಈದ್ಗಾ ಮೈದಾನದ ಬಗ್ಗೆ ನಿಜವಾಗಿಯೂ ಸರ್ಕಾರ ತೆಗೆದುಕೊಂಡಂಥ ನಿರ್ಣಯ ಇಡೀ ರಾಷ್ಟ್ರದಲ್ಲೇ ಮೆಚ್ಚುಗೆ ಯಾದಂಥ ವಿಷಯ. ಈ ಜ್ವಲಂತ ಸಮಸ್ಯೆ ಕಾಂಗ್ರೆಸ್ ಸರ್ಕಾರದಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಇತ್ಯರ್ಥವಾಗದೆ ಉಳಿದಿದ್ದಂಥ ವಿಷಯವನ್ನು ಇವರು ಅಧಿಕಾರಕ್ಕೆ ಬಂದು ಮೂರು ತಿಂಗಳ ಒಳಗೆ ಈ ಸಮಸ್ಯೆಯನ್ನು ಬಗೆಹರಿಸಿದಂತಹ ಯಶಸ್ಸು ಈ ಸರ್ಕಾರದ್ದಾಗಿದೆ. ನಾನು ಈ ಸದನದ ಮುಖಾಂತರ ಹೇಳುವುದೇನೆಂದರೆ, ನಮ್ಮ ಸರ್ಕಾರ ಮಾಡಿದಂಥ ಈ ಕೆಲಸ ಇಡೀ ರಾಷ್ಟ್ರದಲ್ಲಿ ಜ್ವಲಂತ ಸಮಸ್ಯೆಯಾಗಿರುವ ರಾಮಮಂದಿರ,

ಬಾಬರಿ ಮಸೀದಿ ಸಮಸ್ಯೆಯ ಪರಿಹಾರಕ್ಕೆ ಮಾರ್ಗ ಕಲ್ಪಿಸಲಿ ಮತ್ತು ಈ ಮಾದರಿಯ ಮುಖಾಂತರ ಅದಕ್ಕೆ ಉಪಯೋಗವಾಗಲಿ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಎರಡನೆಯದಾಗಿ ಇಡೀ ಕಾಂಗ್ರೇಸ್ ಸರ್ಕಾರದಲ್ಲಿ ಐದುವರ್ಷಗಳಲ್ಲಿ ಪಂಚಾಯತ್ ಚುನಾವಣೆಯನ್ನು ಬಿಟ್ಟು ಬೇರೆ ಯಾವುದೇ ಚುನಾವಣೆಯನ್ನು ಸಹ ಮಾಡಿರಲಿಲ್ಲ. ಅದನ್ನು ಕೂಡ ಪಂಚಾಯತ್ ಚುನಾವಣೆ ಬಗ್ಗೆ ಕೋರ್ಟಿನಿಂದ ಆದೇಶಬಂದಮೇಲೆ ಮೂಡಿದರೇ ಹೊರತು ಸ್ವತಃ ತಾವಾಗಿ ಏನೂ ಮಾಡಲಿಲ್ಲ. ಆದರೆ ಈ ಸರ್ಕಾರ ಅಧಿ ಕಾರಕ್ಕೆ ಬಂದ ಸ್ವಲ್ಪ ದಿವಸಗಳಲ್ಲೇ ಚುನಾವಣೆಯಲ್ಲಿ ಭರವಸೆ ಕೊಟ್ಟಂತೆ ಎರಡು ತಿಂಗಳೊಳಗೇ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಆಸಕ್ತಿ ವಹಿಸಿದ ಈ ಸರ್ಕಾರ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಬಹಳ ಶಾಂತತೆಯಿಂದ, ಕಾಯಿದೆ ಬದ್ಧವಾಗಿ ನಡೆಸಿದ್ದುಈ ಯಶಸ್ಸು ಕೂಡ ಈ ಸರ್ಕಾರಕ್ಕೆ ಸಲ್ಲುತ್ತದೆ. ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಸರ್ಕಾರದ ಧೋರಣೆ ಏನಿದೆ, ಅದರಲ್ಲಿ ಎಷ್ಟರಮಟ್ಟಿಗೆ ಆಸಕ್ತಿಯನ್ನು ಹೊಂದಿದೆ ಎಂಬುದನ್ನು